ಬೇರೆ ಇಲಾಖೆಗಳಲ್ಲಿ ನೇಮಿಸಿರುವ ಆಕ್ಟ್ರಾಯ್ ಸಿಬ್ಬಂದಿಯ ಸಂಖ್ಯೆ

ಳಿಸಿರ ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).–ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುರಸಭೆಗಳಲ್ಲಿ ಆಕ್ಟ್ರಾಯ್ ಜಜಾ ಆದ ಮೇಲೆ ಹೆಚ್ಚುವರಿ ಸಿಬ್ಬಂದಿಯನ್ನು ಬೇರೆ ಇಲಾಖೆಗಳಲ್ಲಿ ನೇಮಿಸಿರುವವರ ಸಂಖ್ಯೆ ಎಷ್ಟು ?

ಆ) ಇವರ ಸೇವಾ ಸೌಲಭ್ಯಗಳೇನು ?

ಇ) ಪುರಸಭೆಗಳಲ್ಲಿ ಕೆಲಸ ಮಾಡುತ್ತಿರುವ ಆಕ್ಟ್ರಾಯ್ ಸಿಬ್ಬಂದಿಗಳಿಗಿರುವ ಸೌಲಭ್ಯಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಪುರಸಭೆಗಳಲ್ಲಿ ಆಕ್ಟ್ರಾಯ್ ಜಜಾ ಆದ ಮೇಲೆ ಬೇರೆ ಇಲಾಖೆಗಳಲ್ಲಿ ೧೨೫೫ ಜನ ನೌಕರರನ್ನು ನೇಮಿಸಲಾಗಿದೆ.

ಆ) ಸರ್ಕಾರಿ ಆದೇಶ ಸಂಖ್ಯೆ. ಹೆಚ್‌ಯುಡಿ ೧೦೦ ಕೆ.ಎಂ.ಆರ್. ೮೫ ಬೆಂಗಳೂರು ದಿನಾಂಕ ೩೧-೧-೧೯೮೭ರನ್ವಯ ಸರ್ಕಾರಿ ನೌಕರರಿಗೆ ಸಿಕ್ಕುವ ಸೇವಾ ಸೌಲಭ್ಯಗಳನ್ನು ಪುರಸಭೆ ನೌಕರರಿಗೂ ವಿಸ್ತರಿಸಲಾಗಿದೆ.

ಇ) ಪುರಸಭಾ ಇತರ ನೌಕರರಿಗೆ ಸಿಕ್ಕುವ ಸೌಲಭ್ಯವನ್ನು ಆಕ್ಟ್ರಾಯ್ ಸಿಬ್ಬಂದಿಗಳಿಗೆ ವಿಸ್ತರಿಸಲಾಗಿದೆ.

ಪುರಸಭೆಗಳಲ್ಲಿ ಎರವಲು ಸೇವೆಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ

೪೫೯. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).–ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಪುರಸಭೆಗಳಲ್ಲಿ ಬೇರೆ ಇಲಾಖೆಗಳಿಂದ ಎರವಲು ಸೇವೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ?

ಆ) ಇವರುಗಳನ್ನು ಅವರ ಮಾತೃ ಇಲಾಖೆಗೆ ವಾಪಸ್ಸು ಕಳುಹಿಸಿ ಅವರ ಸ್ಥಾನಗಳಿಗೆ ಪುರಸಭಾ ನೌಕರರಿಗೆ ಬಡ್ತಿ ಕೊಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಒಟ್ಟು ೯೨

ಆರೋಗ್ಯ ಇಲಾಖೆಯಿಂದ (ಆರೋಗ್ಯ ನಿರೀಕ್ಷಕರು)	೭೭
ಲೋಕೋಪಯೋಗಿ ಇಲಾಖೆಯಿಂದ (ಕಿರಿಯ ಅಭಿಯಂತರರು)	೧೫
ಕಂದಾಯ ಇಲಾಖೆಯಿಂದ (ಗುಮಾಸ್ತರು)	೪
ಒಟ್ಟು	೯೨

ಆ) ಪುರಸಭೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪುರಸಭೆಯ ತಾಂತ್ರಿಕ ಸಿಬ್ಬಂದಿಯವರು ಇರುವುದಿಲ್ಲ ಆದ್ದರಿಂದ ಇತರ ಸೇವೆ ಅಗತ್ಯವಿದೆ. ಹಂತ ಹಂತವಾಗಿ ಇವರನ್ನು ವಾಪಸ್ಸು ಕಳಿಸಲಾಗುವುದು, ಮತ್ತು ಅರ್ಹ ಪುರಸಭಾ ನೌಕರರಿಗೆ ಬಡ್ತಿ ನೀಡಲಾಗುವುದು.